

ರಾಜಹಂಸಗಳ ಕವಾಯತು



ಜಲರಾಶಿ ಸ್ಪರ್ಧಿಸಿ ನೆಗೆಯುತ್ತಿರುವ ನಾರ್ದರ್ನ್ ಷೋವೆಲರ್

## ಹದ್ದುಗಳ ವೈಭವ

ಭಿಗ್ವಾನ್ ಕೇವಲ ಜಲಪಕ್ಷಿಗಳಿಗೆ ಮಾತ್ರ ಹೆಸರುವಾಸಿಯಲ್ಲ. ಹದ್ದುಗಳ ಪಾಲಿಗೂ ಸ್ವರ್ಗ. ಹದ್ದು, ಗಿಡುಗ, ಗೂಬೆಗಳಿಗೂ ಇದು ಆವಾಸಸ್ಥಾನ. ಎರಡನೇ ದಿನ ಬೆಳಿಗ್ಗೆ 5 ಗಂಟೆಗೆ ನಾವು ಹದ್ದುಗಳನ್ನು ಹುಡುಕುತ್ತಾ ಹೊರಟೆವು. 45 ನಿಮಿಷಗಳ ಪ್ರಯಾಣದ ಬಳಿಕ ಹುಲ್ಲುಗಾವಲು ತಲುಪಿದೆವು. ಕಂದು ಬಣ್ಣದ ಹದ್ದು ಸೇರಿದಂತೆ ಹತ್ತಾರು ಹದ್ದುಗಳು ಹಳ್ಳಿಗರು ಎಸೆದ ಕೋಳಿಯ ತ್ಯಾಜ್ಯವನ್ನು ತಿನ್ನುತ್ತಿದ್ದವು.

ಪ್ಯಾಲಿಡ್ ಹ್ಯಾರಿಯರ್, ಕೆಂಪು ಕತ್ತಿನ ಗಿಡುಗ, ಬಿಳಿ ಗಿಡುಗ, ಗಿಡ್ಡ ಕಾಲುಬೆರಳ ಹಾವು ಹದ್ದು (shor toe Snak eagle) ಮುಂತಾದ ವಿವಿಧ ಜಾತಿಯ ಬೇಟೆಗಾರ ಪಕ್ಷಿಗಳು ವಿವಿಧ ಋತುಗಳಲ್ಲಿ ಇಲ್ಲಿಗೆ ಆಗಮಿಸಿ ಹಕ್ಕಿಗಳನ್ನು ಬೇಟೆಯಾಡುತ್ತವೆ.

ಈ ಹುಲ್ಲುಗಾವಲು ಕೆಲವು ಜಾತಿಯ ಗೂಬೆಗಳಿಗೂ ತಾತ್ಕಾಲಿಕ ನೆಲೆಯಾಗಿದೆ. ದಟ್ಟವಾದ ಹುಲ್ಲಿನಲ್ಲಿ ಅಡಗಿಕೊಳ್ಳುವ ಗೂಬೆಯನ್ನು ನೋಡುವುದಷ್ಟೇ ಅಲ್ಲ, ಕ್ಯಾಮೆರಾದಲ್ಲಿ ಸೆರೆ ಹಿಡಿಯುವ ಭಾಗ್ಯವೂ ನಮ್ಮದಾಯಿತು. ಗೂಬೆ ಮರಿಗಳು, ಸಾಮಾನ್ಯ ಸ್ಕೂಪ್ ಗೂಬೆ ಮತ್ತು ಮೊಟೆಡ್ ಮರದ ಗೂಬೆಗಳೊಂದಿಗೆ ಭಾರತೀಯ ಹದ್ದು–ಗೂಬೆಯನ್ನು ಗುರುತಿಸಿದೆವು.

ಪ್ರವಾಸಿಗರ ಕೈಯಿಂದ ಮೀನುಗಳನ್ನು ಕಸಿದುಕೊಂಡವು. ಆದರೆ, ಛಾಯಾಚಿತ್ರದ ಆಸೆಗಾಗಿ ಪಕ್ಷಿಗಳಿಗೆ ಚುರುಮುರಿ ಅಥವಾ ಮೀನುಗಳನ್ನು ನೀಡಲು ನಮಗೆ ಮನಸ್ಸಾಗಲಿಲ್ಲ. ಏಕೆಂದರೆ ಇದು ಅವುಗಳ ಸರಿಯಾದ ಆಹಾರದ ಕ್ರಮವಲ್ಲ. ನಮ್ಮ ಆಸೆ ಅವುಗಳಿಗೆ ಮಾರಕವಾಗುವ ಆತಂಕ ನಮ್ಮದು.

ದೋಣಿಯು ಮುಂದೆ ಸಾಗಿದಂತೆ ಇನ್ನಷ್ಟು ಅಪರೂಪದ ಹಕ್ಕಿಗಳ ಚಹರೆಗಳು ಕ್ಯಾಮೆರಾದಲ್ಲಿ ಬಂದಿಯಾದವು. ವಿವಿಧ ಜಾತಿಯ ಕೊಕ್ಕರೆಗಳು ಮೆರವಣಿಗೆ ಹೊರಟಂತಿದ್ದವು.

ನಾರ್ದರ್ನ್ ಷೋವೆಲರ್, ಗೆರ್ಜೆನಿಯಾ, ಪೇಂಟೆಡ್ ಸ್ಟಾರ್ಕ್, ರಡ್ಡಿ ಶೆಲ್ಡಕ್, ಲಿಟಲ್ ರಿಂಗ್ಡ್ ಪ್ಲೋವರ್ (ಸಣ್ಣ ಕರಿಪಟ್ಟೆ ಗೊರವ), ಬಾರ್ ಹೆಡೆಡ್ ಗೂಸ್ ಸೇರಿದಂತೆ ಹಲವಾರು ಪಕ್ಷಿಗಳ ವಿಹಾರ, ಆಹಾರ ಹೆಕ್ಕುವ ಪರಿಗಳು ಕ್ಯಾಮೆರಾದ ಮೆಮೊರಿ ಕಾರ್ಡ್‌ನಲ್ಲಿ ಭರ್ತಿಯಾಗುತ್ತಲೇ ಇದ್ದವು. ಬೆಳಿಗ್ಗೆಯೇ ಹೆಬ್ಬಾತುಗಳನ್ನು ನೋಡಿದ್ದರೂ, ಈ ಗುಲಾಬಿ ಬಣ್ಣದ ಸುಂದರಿಯನ್ನು 'ಕ್ಲಿಕ್' ಮಾಡಲು ಉತ್ತಮ ಸಮಯವೆಂದರೆ ಸಂಜೆ ಎಂದು ಉಮೇಶ್ ಸಲಹೆ ನೀಡಿದರು.

ಸೂರ್ಯಾಸ್ತದ ಹೊಂಗಿರಣಗಳ ನಡುವೆ ಫ್ಲೆಮಿಂಗೊಗಳು ಹಾರುವ ಮತ್ತು ಭೂಸ್ಪರ್ಶ ಮಾಡುವ ಕ್ಷಣಗಳು ಸುಂದರ ಕಾವ್ಯದಂತೆಯೇ ಭಾಸವಾದವು. ದಿನದ ಅಂತ್ಯಕ್ಕೆ ಫ್ಲೆಮಿಂಗೊಗಳ ಸಾವಿರಕ್ಕೂ ಹೆಚ್ಚು ಛಾಯಾಚಿತ್ರಗಳನ್ನು ಕ್ಲಿಕ್ಕಿಸಿದೆವು. ಅವುಗಳೆಲ್ಲ ಒಂದಕ್ಕಿಂತ ಒಂದು ಚಂದ, ಉತ್ತಮವಾದದನ್ನು ಆಯ್ಕೆ ಮಾಡುವುದು ಕಷ್ಟ.

ನಾವು ತಯಾರಿಸಿದ್ದ 24 ಪಕ್ಷಿಗಳ ಮತ್ತು ಪ್ರಾಣಿಗಳ ಪಟ್ಟಿಯಲ್ಲಿ 19ನ್ನು ಮಾತ್ರ ವೀಕ್ಷಿಸಲು ಸಾಧ್ಯವಾಯಿತು. ಬೂದುತೋಳಗಳು ಮತ್ತು ಕತ್ತೆಕಿರುಬಗಳು ಕಾಣಲಿಲ್ಲ. ನಾವು ಬಂಗಾಳದ ನರಿಯನ್ನು ಅದರ ಗುಹೆ, ಚಿಂಕಾರಗಳ ಹಿಂಡು ಮತ್ತು ಕೃಷ್ಣಮೃಗಗಳನ್ನು ಸುಲಭವಾಗಿ ನೋಡಿದರೂ, ತೋಳಗಳನ್ನು ನೋಡುವ ಅದೃಷ್ಟ ನಮಗಿರಲಿಲ್ಲ. ಮತ್ತೊಂದು ಭೇಟಿಯಲ್ಲಿ ಈ ಪಟ್ಟಿ ಪೂರ್ಣಗೊಳಿಸುವ ನಿರೀಕ್ಷೆಯಿದೆ.





ಸ್ಯಾಂಡ್‌ಪೈಪರ್ ಹಕ್ಕಿ

**ಪ್ರತಿಕ್ರಿಯಿಸಿ: feedback@sudha.co.in**